
ದೂರ ಮಾಡಿ ಜನರಿಗೆ ಹೊಸ ಹಾದಿ ತೋರಿದರು. ಕುವೆಂಪು ಅವರು 'ದೇಹದೇಗುಲ'ದ ಒಳಗಿನ ಹೃದಯಕ್ಕೆ ದೈವವನ್ನು ಕೊಂಡೊಯ್ದರು. ಇಲ್ಲಿ ಬಸವಣ್ಣನವರ ದೇಹವೇ ದೇಗುಲವೆಂಬ ಕ್ರಾಂತಿಕಾರಿ ಕಲ್ಪನೆಯೂ ಉಳಿಯಿತು. ದೈವದ ಸ್ಥಾನವು ಹೃದಯಕ್ಕೆ ಸ್ಥಳಾಂತರಗೊಂಡಿತು. ಅಷ್ಟೇ ಅಲ್ಲ, 'ಆಕಾರ'ದಿಂದ 'ನಿರಾಕಾರ'ದಲ್ಲಿ ದೈವವನ್ನು ಕಂಡಿತು. ದೇಹ ಮತ್ತು ಹೃದಯಗಳ ಸಂಬಂಧವನ್ನು ಬೆಸೆಯಿತು. ಇದು ಕನ್ನಡನಾಡಿನ ಚಿಂತನೆಯು ವಿಕಾಸಗೊಂಡ ಇತಿಹಾಸ.

ಇಂದಿನ ತುರ್ತು ಅಗತ್ಯವಾದ ಸಮಾನತೆ ಮತ್ತು ಸೌಹಾರ್ದತೆಯ ಪ್ರತಿಪಾದನೆಗೆ ಸಾಕ್ಷಿಯಾದ ರಚನೆಗಳನ್ನು ಕುವೆಂಪು ಅವರಲ್ಲಿ ಸ್ಪಷ್ಟವಾಗಿ ಕಾಣಬಹುದು. 'ಸರ್ವರಿಗೆ ಸಮಬಾಳು| ಸರ್ವರಿಗೆ ಸಮಪಾಲು' ಎಂಬ ಕುವೆಂಪು ಕವಿತೆಯ ಸಾಲುಗಳು ಸಮಾನತೆಯ ಸಂಕೇತವಾದರೆ, 'ಭಾರತ ಜನನಿಯ ತನುಜಾತೆ| ಜಯಹೇ ಕರ್ನಾಟಕ ಮಾತೆ' ಎಂದು ಆರಂಭವಾಗುವ ಕವಿತೆಯ 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಸಾಲು, ಸೌಹಾರ್ದತೆಯ ಪ್ರತೀಕವಾಗಿದೆ. ಅಲ್ಲದೇ, ನಮ್ಮ 'ನಾಡಗೀತೆ'ಯ ಈ ಸಾಲು ಸರ್ವ ಜನಾಂಗದ ಪ್ರಸ್ತಾಪ ಮಾಡುತ್ತಲೇ ಬಹುತ್ವವನ್ನು ಒಳಗೊಳ್ಳುತ್ತದೆ. ನಾಡಗೀತೆಯಲ್ಲಿ ವಿವಿಧ ಧರ್ಮಗಳ ಪ್ರಸ್ತಾಪವೂ ಇದ್ದು ಬಹುತ್ವದ ತತ್ವಕ್ಕೆ ಪೂರಕವಾಗಿದೆ.



ಮತ್ತಷ್ಟು ವಿಸ್ತರಿಸಿ ನೋಡಿದಾಗ 'ಭಾರತ ಜನನಿಯ ತನುಜಾತೆ| ಜಯಹೇ ಕರ್ನಾಟಕ ಮಾತೆ' ಎನ್ನುವ ಮೂಲಕ ಕುವೆಂಪು ಅವರು ಒಕ್ಕೂಟ ವ್ಯವಸ್ಥೆಯಲ್ಲಿ ದೇಶ ಮತ್ತು ರಾಜ್ಯಗಳು ತಾಯಿ–ಮಗಳಂತೆ ಇರಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಇದೇ ಆಶಯವನ್ನು ಕುವೆಂಪು ಅವರು ಇನ್ನೊಂದು ಕಡೆ ಹೀಗೆ ಸ್ಪಷ್ಟಪಡಿಸಿದ್ದಾರೆ: 'ಕರ್ನಾಟಕ, ಭಾರತ ಮಾತೆಯ ಒಬ್ಬ ಮಗಳು, ಆಂಧ್ರ, ತಮಿಳು, ಮಲಯಾಳ, ಮಹಾರಾಷ್ಟ್ರ, ಗುಜರಾತ್, ಬಂಗಾಳಿ ಮುಂತಾದವರು ಕರ್ನಾಟಕದ ಸೋದರಿಯರು. ಮಗಳು ಹಾಳಾಗಿ ತಾಯಿ ಬೆಳೆಯುವುದು ಸಾಧ್ಯವೇ ಇಲ್ಲ. ಇಲ್ಲಿ ಕುವೆಂಪು ಅವರು ಸ್ಪಷ್ಟವಾಗಿ ಒಕ್ಕೂಟ ಪದ್ಧತಿಯ ನೀತಿಯನ್ನು ಪ್ರತಿಪಾದಿಸಿದ್ದಾರೆ. ದೇಶದೊಳಗಿನ ರಾಜ್ಯಗಳ ಅಭಿವೃದ್ಧಿಯಲ್ಲೇ ದೇಶದ ಅಭಿವೃದ್ಧಿಯಿದೆಯೆಂಬ ಪರಿಕಲ್ಪನೆಯ ಜೊತೆಗೆ ರಾಜ್ಯಗಳ ಮಹತ್ವವನ್ನು ಪ್ರತಿಪಾದಿಸಿದ್ದಾರೆ. ಇದೇ ಒಕ್ಕೂಟ ಪದ್ಧತಿಯ ಸಾರ. ತಾಯಿ, ಮಕ್ಕಳು, ಸೋದರಿಯರು ಎಂಬ ಪರಿಭಾಷೆಯನ್ನು ಬಳಸುವ ಮೂಲಕ ಕುಟುಂಬ ಸಂವೇದನೆಯ ಸಂಕೇತವಾಗಿ ಒಕ್ಕೂಟ ಪದ್ಧತಿಯನ್ನು ಪರಿಗಣಿಸಿದ್ದಾರೆ. ವಿಶೇಷವೆಂದರೆ, ಕುವೆಂಪು ಅವರು ತಾಯಿ, ಸೋದರಿ, ಮಗಳು ಎಂಬ ಸಂಬೋಧನೆಯ ಮೂಲಕ ಒಕ್ಕೂಟ ಪದ್ಧತಿಗೆ ಸ್ತ್ರೀ ಸಂವೇದನೆಯ ಸೂಕ್ಷ್ಮತೆಯನ್ನೂ ಒದಗಿಸಿದ್ದಾರೆ. ಒಕ್ಕೂಟ ಪದ್ಧತಿಯ ಬಗ್ಗೆ ಕುವೆಂಪು ವಿಚಾರಧಾರೆಯು ಎಷ್ಟು ಸ್ಪಷ್ಟವಾಗಿದೆಯೆಂಬುದಕ್ಕೆ ಮುಂದೆ ಉಲ್ಲೇಖಿಸಿರುವ ಅವರ ಅಭಿಪ್ರಾಯವೇ ಸಾಕ್ಷಿಯಾಗಿದೆ: 'ರಾಜ್ಯಗಳಿಗೆ ಸ್ವಾಯತ್ತತೆ ಅಗತ್ಯ, ಅಮೆರಿಕದ ಸ್ಟೇಟ್‌ಗಳಿಗಿರುವಂತೆ. ಅಲ್ಲಿ ಹೊಸ ಹೊಸ ಸಂಸ್ಥಾನಗಳು ಉದ್ಭವಿಸುತ್ತಲೇ ಇವೆ. ಅವುಗಳಿಗೂ ಸ್ವಾತಂತ್ರ್ಯವಿರುತ್ತದೆ; ರಾಷ್ಟ್ರಕ್ಕೂ ಭದ್ರತೆಯಿರುತ್ತದೆ. ನಮ್ಮದು ಯುನೈಟೆಡ್ ಸ್ಟೇಟ್ಸ್ ಆಫ್ ಇಂಡಿಯಾ ಆಗಬೇಕೆಂಬುದೇ ನನ್ನ ದೃಢವಾದ ಅಭಿಪ್ರಾಯ. ರಾಜ್ಯಗಳು ಸ್ವಾಯತ್ತವಾಗಿರಲಿ; ಸೈನ್ಯ ಮುಂತಾದ ವ್ಯವಸ್ಥೆಗಳು ಕೇಂದ್ರದ ಕೈಯಲ್ಲಿರಲಿ' – ಇದು ಕುವೆಂಪು ಅವರ ಖಚಿತ ಅಭಿಮತ.

ಹೀಗೆ ಕುವೆಂಪು ಅವರು ಸಮಾನತೆ, ಸೌಹಾರ್ದತೆ, ಬಹುತ್ವ ಮತ್ತು ಒಕ್ಕೂಟ ಪದ್ಧತಿಗಳ ಪ್ರತಿಪಾದಕರಾಗಿ, ಇಂದಿಗೂ ಪ್ರಸ್ತುತರಾಗಿದ್ದಾರೆ. ಎಂದಿಗೂ ಪ್ರಸ್ತುತರಾಗಿರುತ್ತಾರೆ.

●